ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯಂವರು).—[illegible]

ಅ)		೧೯೮೯–೯೦	೧೯೯೦–೯೧ (೧೦/೯೦ನೇ ಕೊನೆಯವರೆಗೆ)
೧)	ದುರಸ್ತಿ (ಸಿವಿಲ್ ವಿದ್ಯುತ್ ಕೆಲಸಗಳು ಸೇರಿದಂತೆ)	೮.೨೧,೯೯೩.೦೦	೨೪,೩೭,೬೩೪.೦೦
೨)	ಪೀಠೋಪಕರಣಗಳು	೧೪,೧೭,೫೪೯.೦೦	೩೮ ೬೪,೪೨೪.೦೦
೩)	ದೂರವಾಣಿ ವೆಚ್ಚ	೧,೭೫,೨೭೦.೦೦	೧೦,೬೫,೧೮೬.೦೦
	ಒಟ್ಟು	೨೪.೧೪,೮೧೨-೦೦	೭೩.೬೭,೨೪೪.೦೦

ಭಾರಿ ಹಾಗೂ ಮಧ್ಯಮ ನೀರಾವರಿ ಬಗ್ಗೆ

೧೫೮. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ಮೂಲಕ ಎಷ್ಟು ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಲು ಸರಕಾರ ಉದ್ದೇಶಿಸಿದೆ ?

(ಆ) ಈ ವರ್ಷ ಇದುವರೆವಿಗೂ ಎಷ್ಟು ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಲಾಗಿದೆ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

(ಅ) ೩೮.೨೨೮ ಹೆಕ್ಟೇರುಗಳು,

(ಆ) ಸಪ್ಟೆಂಬರ್ ೧೯೯೦ರ ಅಂತ್ಯದವರೆಗೆ ೧೪,೯೫೫ ಹೆಕ್ಟೇರುಗಳು.

ಹಾಸನ ಪಟ್ಟಣದ ಕಿಂಕೋ ಫ್ಯಾಕ್ಟರಿ ಬಗ್ಗೆ

೧೬೬. ಶ್ರೀ ಕೆ, ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಪಟ್ಟಣದ ಕಿಂಕೋ ಕಾರ್ಖಾನೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳಿಗೆ ಬೇಕಾಗುವ ಬಿಡಿ ಭಾಗಗಳನ್ನು ತಯ್ಯಾರಿಸುವ ಘಟಕವನ್ನು ಪ್ರಾರಂಭಿಸಲು ಸರ್ಕಾರ ಯೋಚಿಸಿದೆಯೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

(ಆ) ೩೫ ಲಕ್ಷ ರೂಪಾಯಿಗಳ ಬಂಡವಾಳದಲ್ಲಿ ಕಿಂಕೋ ಕಾರ್ಖಾನೆಯು ಹಾಸನ ವಿಭಾಗದಲ್ಲಿ ಆಟೋಮೊಬೈಲ್ ಲೀಫ್ ಸ್ಪ್ರಿಂಗ್ಸ್ ತಯಾರಿಸುವುದಕ್ಕೆ ಪ್ರಸ್ತಾಪ ಮಾಡಲಾಗಿತ್ತು. ಆದರೆ ಈ ಕಂಪನಿಯಂ ಎದುರಿಸುತ್ತಿರುವ ಹಣಕಾಸು ಪರಿಸ್ಥಿತಿಯಿಂದ ಈ ಯೋಜನೆಯನ್ನು ಸಧ್ಯಕ್ಕೆ ಮುಂದೂಡಲಾಗಿದೆ.

ತ್ಯಾಗಟೂರಂ ಗ್ರಾಮವನ್ನು ಸ್ಥಳಾಂತರಿಸುವುದು

೧೬೭ ಶ್ರೀ ಕೆ. ಹೆಚ್., ಹನುಮೇಗೌಡ (ಹಾಸನ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ತಾಲ್ಲೂಕು ಕಟ್ಟಾಯದ ಹೋಬಳಿ ತ್ಯಾಗಟೂರು ಗ್ರಾಮವು ಹೇಮಾವತಿ ನಾಲೆಯ ಕೆಳಭಾಗದಲ್ಲಿದ್ದು ಮಳೆಗಾಲದಲ್ಲಿ ಅಲ್ಲಿ ತುಂಬಾ ಕೆಸರಿದ್ದು ಜನರ ವಾಸಕ್ಕೆ ಯೋಗ್ಯವಲ್ಲವೆಂದು ಈ ಗ್ರಾಮವನ್ನು ಸ್ಥಳಾಂತರಿಸಲು ಯಾವ ತಾರೀಖಿನಲ್ಲಿ ಅವಾರ್ಡ್ ಮುಂಜೂರಾಗಿದೆ.

ಆ) ಈ ಗ್ರಾಮಕ್ಕೆ ಅವಾರ್ಡ್ ಹಣ ಬಿಡುಗಡೆಯಾಗದಿರಲು ಕಾರಣಗಳೇನು?